
ಸಾಧ್ಯತೆಯೇ ಇರಲಿಲ್ಲ. ಅದು ಅವನ ಕಾಲನ್ನು ಹಿಡಿದು ಎಳೆಯತೊಡಗಿತು. ಕ್ರಮಕ್ರಮೇಣ ಅವನು ಅದರ ಬಾಯೊಳಗೆ ಹೋಗುತ್ತಿದ್ದಾನೆ. ಈಗ ಸಾವು ನಿಶ್ಚಯ.

ಕೊನೆಗಾಲದಲ್ಲಿ ಅವನಿಗೆ ಸುಬುದ್ಧಿಯ ನೆನಪಾಯಿತು. ತಾನು ಸತ್ತರೂ ಪರವಾಗಿಲ್ಲ, ಅವನೂ ಸತ್ತಿರಬಹುದಲ್ಲ ಎಂಬ ಆಶೋತ್ತರದಿಂದ ದೋಣಿಯ ಕಡೆ ಕಣ್ಣು ಹಾಯಿಸಿದ.




ಅವನು ಕಂಡ ದೃಶ್ಯ ಅವನನ್ನು ದಿಗ್ಭ್ರಮೆಗೊಳಿಸಿತು. ಅತ್ಯಂತ ಹತಾಶ ಮನೋಭಾವದಿಂದ'ಹಾಯ್' ಎನ್ನುವಷ್ಟರಲ್ಲಿ ಮೊಸಳೆ ಅವನನ್ನು ಸಂಪೂರ್ಣ ನುಂಗಿ ಬಿಟ್ಟಿತು.

ಅವನೇನು ಕಂಡ? ದೋಣಿ ನಡೆಸುವವನು ಕಷ್ಟಪಟ್ಟು ಸುಬುದ್ಧಿಯನ್ನು ಹಿಡಿದು ದೋಣಿಯ ಹತ್ತಿರ ಕರೆದುಕೊಂಡು ಬಂದನು. ಇಬ್ಬರೂ ಮತ್ತೆ ದೋಣಿಯನ್ನು ಹತ್ತಿ ದಡದ ಕಡೆ ಹೊರಟರು. ಈ ದೃಶ್ಯವೇ ಕುಬುದ್ಧಿಯನ್ನು ದಿಗ್ಭ್ರಮೆಗೊಳಿಸಿದ್ದು.

ನ ಹಿ ವೈರೇಣ ವೈರಾಣಿ
ಶಾಮ್ಯತೀಹ ಕದಾಚನ |
ಅವೈರೇಣ ಚ ಶಾಮ್ಯಂತಿ
ಏಷ ಧರ್ಮ ಸನಾತನಃ ||
ಧಮ್ಮಪದ

'ದ್ವೇಷದಿಂದಲೇ ದ್ವೇಷವು ಖಂಡಿತ ನಾಶವಾಗುವುದಿಲ್ಲ. ಪ್ರೀತಿಯಿಂದ ಅದು ನಾಶವಾಗುತ್ತದೆ. ಇದೇ ಸನಾತನವಾದ ಧರ್ಮ.' ⓟ



ಶ್ರೀರಾಮಕೃಷ್ಣರು ಹೇಳಿದ ಕಥೆ

## ಜ್ಞಾನಿ ಕೃಷಿಕ


ಪದ್ಯಾನುವಾದ :ಮತ್ತ ಶಾಮಭಟ್ಟ

**ಕೃಷಿಕ** ದಂಪತಿಗಳಿಗೆ ಜನಿಸಿದ
ಮಗನು– ಹರೆಯದ ಕಾಣಿಕೆ |
ರೆಪ್ಪೆಯಂದದಿ ನಲಿದು ಪೊರೆದರು
ಬಾಷ್ಪ ಹರಿದಾನಂದಕೆ ‖೧‖

**ಒಂದು** ದಿನ ಹೊಲದಲ್ಲಿ ಉಳುತಿರೆ
ನೆರೆಯ ರೈತನು ಬಂದನು |
'ನಿಮ್ಮ ಮಗ ಬಲು ಸುಸ್ತುಗೊಂಡಿಹ,
ಒಡನೆ ಬನ್ನಿರಿ'ಎಂದನು ‖೨‖

**ಮನೆಯ** ಕಡೆ ಧಾವಿಸಿದ ರೈತನು
ಕಂಡ ಕಣ್ಮಣಿ ಮರಣವ |
ಸುತ್ತ ಹೆಂಡತಿ ಬಂಧು ಬಳಗದ
ಸುರಿವ ಮಳೆ ಕಣ್ಣೀರಿನ ‖೩‖

**ಚಲಿತ**ನಾಗದೆ ಮಾತನಾಡದೆ
ಕಣ್ಣ ನೀರನು ಸುರಿಸದೆ |
ಕ್ರಿಯೆಯ ನಂತರ ಹೊಲಕೆ ನಡೆದನು
ಕಾಮವಿಲ್ಲದ ಕರ್ಮಕೆ ‖೪‖




**ಮಡದಿ** ದುಃಖದಿ ಮುಳುಗಿ ಬೈದಳು
'ಹೃದಯ ಶೂನ್ಯದ' ಗಂಡಗೆ |
ಮುದ್ದು ಮಗನಿಗು ಅಳುವು ಬಾರದೆ
ಕಠಿಣ ಮನವಿದು ಯಾತಕೆ ‖೫‖

**ನಿಜವ** ನುಡಿವೆನು 'ನಿನ್ನೆ ರಾತ್ರಿಯೆ
ಕನಸ ಕಂಡೆನು ನಿಖರದಿ |
ನಾನು ರಾಜ್ಯದ ರಾಜನಾದೆನು
ಬಹಳ ವೈಭವದಿಂದಲಿ ‖೬‖

**ವೀರ**ಶೂರರು ನನ್ನ ಮಕ್ಕಳು
ಏಳು ಜನ ಜತೆಗಿದ್ದರು |
ಬರಲು ಎಚ್ಚರವೆಲ್ಲವಳಿಯಿತು;
ನಿಜವು ಯಾವುದು ತಿಳಿಯದು' ‖೭‖

**ಜ್ಞಾನಿ** ಕೃಷಿಕನು ನುಡಿದನೀತೆರ
'ಸ್ವಪ್ನ ಜಾಗ್ರತ ಸ್ಥಿತಿಗಳು |
ಎರಡು ಸಮವಾಗಿರುವ ಜ್ಞಾನಿಯು
ದೇವರೇಚ್ಛೆಗೆ ಮಣಿವನು' ‖೮‖